ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 13.09.2023.

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಾವಾ ಆಸ್ತಿಗಳ ಪೈಕಿ ಜಮೀನು ಮತ್ತು ಮನೆಗಳಿಗೆ ಸಂಬಂಧಪಟ್ಟಂತೆ ಎರಡು ಪಾಲುಗಾರಿಕೆಯ ಜ್ಞಾಪನಾ ಪತ್ರಗಳನ್ನು ನ್ಯಾಯಾಲಯಕ್ಕೆ ಈಗಾಗಲೇ ಹಾಜರುಪಡಿಸಿದ್ದು, ಅದಕ್ಕೆ ತಗಲುವ ಈಗಾಗಲೇ ನ್ಯಾಯಾಲಯಕ್ಕೆ ಭರನಾ ಮಾಡಿರುತ್ತೇನೆ, ಕಾರಣ ಸದರಿ ಎರಡು ದಾಖಲೆಗಳನ್ನು ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ಮತ್ತು ನಿಡಿ-2 ರಲ್ಲಿ ಸಾಕ್ಷಿ ತಮ್ಮ ತಂದೆ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಡಿ-1(ಎ) ರಿಂದ ನಿಡಿ-1(ಸಿ) ಎಂದು ಗುರುತಿಸಲಾಯಿತು. ನಿಡಿ-1 ಕ್ಕೆ ನನ್ನ ಅಣ್ಣ ಅಂಬಾರಾಯ ಸಹಿ ಮಾಡಿದ್ದು, ಅದನ್ನು ನಿಡಿ-1(ಡಿ) ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಡಿ-1(ಇ) ಎಂದು ಗುರುತಿಸಲಾಯಿತು. ನಿಡಿ-1 ಕ್ಕೆ ಸಾಕ್ಷಿದಾರರು ಅಂತ ಮಾಣಿಕಪ್ಪ, ಮುರಗಯ್ಯ, ಶಿವಾನಂದ, ಬಸವಣ್ಣೆಪ್ಪ ರವರು ಸಹಿ ಮಾಡಿದ್ದು, ಅವುಗಳನ್ನು ನಿಡಿ-1(ಎಫ್) ರಿಂದ ನಿಡಿ-

1(ಐ) ಎಂದು ಗುರುತಿಸಲಾಯಿತು. ನನ್ನ ತಂಗಿ ಶಿವಲೀಲಾ 5 ನೇ ಪ್ರತಿವಾದಿ ಕೂಡಾ ಸಹಿ ಮಾಡಿದ್ದು, ಅದನ್ನು ನಿಡಿ-1(ಜೆ) ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ದಾಖಲೆಯನ್ನು ಮಲ್ಲಿಕಾರ್ಜುನ ಎಂಬುವವರು ಬರೆದಿದ್ದು, ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-1(ಕೆ) ಎಂದು ಗುರುತಿಸಲಾಯಿತು.

ನಿಡಿ-2 ರಲ್ಲಿ ಸಾಕ್ಷಿ ತಮ್ಮ ಹಾಗೂ 3 ನೇ ಪ್ರತಿವಾದಿಯ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-2(ಎ) ರಿಂದ ನಿಡಿ-2(ಇ) ಎಂದು ಗುರುತಿಸಲಾಯಿತು. ನಿಡಿ-2 ಕ್ಕೆ ಶಿವಪುತ್ರಪ್ಪ ಮಂಗಾನಿ, ಶಂಭುಲಿಂಗ ಬಳಾಪುರ, ಮುರಗಯ್ಯ ಮಠಪತಿ, ಸಾಯಿಬಣ್ಣ ಬೀರಾದಾರ, ಚಿದಂಬರಾಯ ಬೀರಾದಾರ, ಶಿವಾನಂದ ಮಂಗಾನಿ, ವೀರಭದ್ರಪ್ಪ ಬೀರಾದಾರ ನಿಡಿ-2(ಎಫ್) ರಿಂದ ನಿಡಿ-2(ಎಲ್) ಎಂದು ಗುರುತಿಸಲಾಯಿತು. 2 ನೇ ವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ-2(ಎಂ) ಎಂದು ಗುರುತಿಸಲಾಯಿತು. ನನ್ನ ಹೆಂಡತಿಯಾದ ಶ್ರೀದೇವಿ ರವರು ನಿಡಿ-2 ಕ್ಕೆ ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆ. ಇನ್ನೊಬ್ಬ ಬಸವರಾಜ ಮಹಾಗಾಂವ್ ರವರು ನಿಡಿ-2 ಕ್ಕೆ ಸಹಿ ಮಾಡಿದ್ದು ಅದನ್ನು ನಿಡಿ-2(ಎನ್) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಮಲ್ಲಿಕಾರ್ಜುನ ಎಂಬುವವರು ಬರೆದಿದ್ದು, ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-2(ಒ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**